ಅಸಲು ದಾವಾ ಸಂ. 95 ಃ 2010

ಪಿ.ಡಬ್ಲ್ಯೂ. 1

ಪ್ರಃಮಾಃದಿಃ 19-09-2016.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ 1 ರಿಂದ 4 ಮತ್ತು ಪ್ರತಿವಾದಿ 8 ರಿಂದ 12 ರ ಪರ ಶ್ರೀ ಎಂ ಕೆ ಜೆ ವಕೀಲರಿಂದಃ-

ಈಗ ನಾನು ವ್ಯವಸಾಯ ಮಾಡುತ್ತಿದ್ದೇನೆ. ಮೊದಲು ಭತ್ತದ ವ್ಯಾಪಾರ ಮಾಡುತ್ತಿದ್ದೆ. ಅದೇ ಊರಲ್ಲಿ ವ್ಯಾಪಾರ ಮಾಡುತ್ತಿದ್ದೆ. ಈ ಪ್ರಕರಣದಲ್ಲಿ ನಾನು ಪ್ರಮಾಣ ಪತ್ರ ಹಾಕುವಾಗ ಎಲ್ಲರ ಪರವಾಗಿ ಸಾಕ್ಷಿ ನುಡಿಯುತ್ತೇನೆ ಅಂತ ಹೇಳಿದ್ದೇನೆ ಎಂದರೆ ಸರಿ. ಉಳಿದ ವಾದಿಯರ ಒಪ್ಪಿಗೆ ಪಡೆದಿರುತ್ತೇನೆ. ಅವರಿಂದ ಒಪ್ಪಿಗೆ ತೆಗೆದುಕೊಂಡಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಬೇರೆ ಯಾರಿಂದಲೂ ಸಾಕ್ಷಿ ಹೇಳಿಸುವುದಿಲ್ಲ ನಾನೇ ಸಾಕ್ಷಿ ಹೇಳುತ್ತೇನೆ. ಯಾರಿಂದಲೂ ಒಪ್ಪಿಗೆ ತೆಗೆದುಕೊಂಡು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದೆ. ಸರ್ಕಾರಿ ಆಸ್ತಿ ಸಂಖ್ಯೆ 58 ಕ್ಕೆ ದಾವೆ ದಾಖಲಿಸಿರುತ್ತೇನೆ. ಅದು ಗ್ರಾಮ ಪಂಚಾಯಿತಿ ಆಸ್ತಿ ಇರುತ್ತದೆ. ಖಾಲಿ ಜಾಗ ಜೊತೆಗೆ ಕೋಟೆ ಇರುತ್ತದೆ. ಕೋಟೆಗೆ ಉಡೇವು ಅಂತಲೂ ಕರೆಯುತ್ತಾರೆ. ಕೋಟೆ ಎಂದರೆ ಬೇರೆ ಉಡೇವು ಎಂದರೆ ಬೇರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಹಳ್ಳಿಯಲ್ಲಿ ಉಡೇವು ಎಂದು ಕರೆಯುತ್ತೇವೆ. ಉಡೇವು ಒಳಗಡೆ 25 ರಿಂದ 45 ಅಡಿ ಎತ್ತರದ ವರೆಗೆ ಮಣ್ಣು ಇದೆ ಅದರ ನಂತರ ಖಾಲಿ ಜಾಗ ಇರುತ್ತದೆ. ಸಾಕ್ಷಿ ಮುಂದುವರೆದು 25 ಅಡಿ ವರೆಗೆ ಮಣ್ಣು ಇದ್ದು ದಕ್ಷಿಣಕ್ಕೆ ಬಾಗಿಲು ಇದೆ ಎನ್ನುತ್ತಾರೆ. 1959 ರಿಂದ ಖಾನೆಶುಮಾರಿ ಇರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ವಿಸ್ತೀರ್ಣ ಎಷ್ಟು ಇದೆ ಅಂತ ಇರುತ್ತದೆ. ನನ್ನ ದಾವೆಯಲ್ಲಿ 150 ಇಂಟು 250 ಅಂತ ಒಟ್ಟು ವಿಸ್ತೀರ್ಣ ತೋರಿಸಿದ್ದೇನೆ ಎಂದರೆ ಸರಿ. ಆಸ್ತಿ ಸಂಖ್ಯೆ 58 ರ ಖಾನೆಶುಮಾರಿ ದಾಖಲೆಯಲ್ಲಿ ಎಷ್ಟು ವಿಸ್ತೀರ್ಣ ಅಂತ ಇಲ್ಲ ಹಳೆಯ ಶಾಲೆ ಅಂತ ಇರುತ್ತದೆ. ಖಾನೆಶುಮಾರಿ 59, 4ವರೆ ಇಂಟು 5 ಚದರಗಜ ಇರುತ್ತದೆ. ಖಾನೆಶುಮಾರಿ ನಂ.60 ಅದರ ಅಳತೆ 4ವರೆ ಇಂಟು 5 ಚದರಗಜ ಇರುತ್ತದೆ. ಖಾನೆಶುಮಾರಿ ನಂ.73 ಅದರ ಅಳತೆ 3 ಇಂಟು 13 ಚದರಗಜ ಇರುತ್ತದೆ. ಖಾನೆಶುಮಾರಿ ನಂ.74 ಅದರ ಅಳತೆ 2 ಇಂಟು 13 ಚದರಗಜ ಇರುತ್ತದೆ. ಖಾನೆಶುಮಾರಿ ನಂ.141 ಅದರ ಅಳತೆ 20 ಇಂಟು 40 ಚದರಗಜ ಇರುತ್ತದೆ. ಈ ರೀತಿ ವಿಸ್ತೀರ್ಣವನ್ನು ಪ್ರತ್ಯೇಕವಾಗಿ ಆಗಿಲ್ಲ ಒಟ್ಟು ವಿಸ್ತೀರ್ಣ ಹಾಕಿರುತ್ತೇನೆ. ಈ ರೀತಿ ಪ್ರತ್ಯೇಕವಾಗಿ ಬರೆಯಲು ತೊಂದರೆ ಇರಲಿಲ್ಲ. ನಾನು ಈಗ ಹೇಳುತ್ತಿರುವ ವಿಸ್ತೀರ್ಣಕ್ಕೂ ದಾವೆಯಲ್ಲಿರುವ ವಿಸ್ತೀರ್ಣಕ್ಕೂ ತಾಳೆ ಇಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ವಿಸ್ತೀರ್ಣವನ್ನು ವಾದ ಪತ್ರದಲ್ಲಾಗಲೀ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಕಮ್ಮಾರಗಟ್ಟೆಯಲ್ಲಿದೆ ಎಂದರೆ ಸರಿ. ಕಮ್ಮಾರಗಟ್ಟೆಯಲ್ಲಿ 200 ರಿಂದ 250 ಕುಟುಂಬಗಳು ಇರುತ್ತವೆ. ಅದು ಹಳೆಯ ಊರು ಬಹಳ ವರ್ಷದಿಂದ ವಾಸ ಇರುತ್ತಾರೆ ಎಂದರೆ

ಸರಿ. ಈಗ ವಾಸ ಮಾಡುತ್ತಿರುವ ತಾತ ಮುತ್ತಾತರು ಅಲ್ಲಿ ವಾಸವಿದ್ದರು ಎಂದರೆ ಸರಿ. 2 – 3 ತಲೆಮಾರುಗಳು ಕಳೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ವಾಸ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.1 ಮತ್ತು 2 ರವರು ನಾರಾಯಣಶೆಟ್ಟಿ ಇವರ ಮಕ್ಕಳು ಎಂದರೆ ಸರಿ. ನಾರಾಯಣಶೆಟ್ಟಿ ಇವರು 17.9.1942 ರಲ್ಲಿ ಖಾನೆಶುಮಾರಿ ನಂ.50 ರಲ್ಲಿ 25 ಇಂಟು 15 ಗಜ ಕ್ರಯಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಜಂಜರ್ ನಂ.53ಎ, 53ಬಿ ಮತ್ತು ಖಾತೆ ನಂ.17 ಅಂತ 1960ನೇ ಇಸವಿಯಲ್ಲಿ ಆಗಿರುತ್ತದೆ. ನಂತರ ಕಮ್ಮಾರಗಟ್ಟೆಯಲ್ಲಿ ಗ್ರಾಮ ಪಂಚಾಯಿತಿ ಆಯಿತು ಎಂದರೆ ಸರಿ. ಕಮ್ಮಾರಗಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಸಂಖ್ಯೆ 109ಎ ಮತ್ತು ಆಸ್ತಿ ನಂ.64 ಅಂತ ಆಯಿತು ಎಂದರೆ ನಾನು ನೋಡಿಲ್ಲ. ಈಗಲೂ ಸಹ ನಾರಾಯಣಶೆಟ್ಟಿ ಇವರ ಹೆಸರಿನಲ್ಲಿ ಖಾತೆ ಓಡುತ್ತಿದೆ ಎಂದರೆ ಇರಬಹುದು. ನಾರಾಯಣಶೆಟ್ಟಿ ಸತ್ತ ನಂತರ ಅದೇ ಆಸ್ತಿಯಲ್ಲಿ ಪ್ರತಿವಾದಿ ನಂ. 1 ಮತ್ತು 2 ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಎರಡು ನಾಡ ಹೆಂಚಿನ ಮನೆ ಮತ್ತು ಒಂದು ಆರ್ ಸಿ ಸಿ ಕಟ್ಟಡ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರ್‌ಸಿಸಿ ಕಟ್ಟಡಕ್ಕೆ ಯಾವುದೇ ಪಂಚಾಯಿತಿ ದಾಖಲೆ ಇಲ್ಲ ಎನ್ನುತ್ತಾರೆ. ಸದರಿ ಮನೆಗಳಲ್ಲಿ ಪ್ರತಿವಾದಿ ನಂ.1 ಮತ್ತು 2 ಮತ್ತು ಅವರ ಕುಟುಂಬದವರು ವಾಸ ಇದ್ದಾರೆ ಎಂದರೆ ಸರಿ. ಇನ್ನುಳಿದ ಖಾಲಿ ಜಾಗೆಯಲ್ಲಿ ಗೋಬರ್‌ಗ್ಯಾಸ್ ಮತ್ತು ತೆಂಗಿನ ಮರಗಳು ಇವೆ ಎಂದರೆ ಸರಿಯಲ್ಲ. ಅದು ಸರ್ಕಾರಿ ಸ್ವತ್ತಿನಲ್ಲಿ ಬರುತ್ತವೆ. ಗೋಬರ್ ಗ್ಯಾಸ್ ಮತ್ತು ತೆಂಗಿನ ಮರಗಳು ನಾರಾಯಣ ಶೆಟ್ಟರ ಜಾಗದಲ್ಲಿ ಬರುತ್ತವೆ ಎಂದರೆ ಸರಿಯಲ್ಲ. ಸರ್ಕಾರಿ ಸ್ವತ್ತಿನಲ್ಲಿ ಬರುತ್ತವೆ. ಸದರಿ ಆಸ್ತಿಗೆ ಪ್ರತಿವಾದಿ 1 ಮತ್ತು 2 ರವರು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.3 ರವರು 97 ಇಂಟು 29 ಜಾಗೆಯಲ್ಲಿ ವಾಸ ಇದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅಷ್ಟು ಜಾಗೆ ಇಲ್ಲ ಸರ್ಕಾರಿ ಜಾಗೆಯಲ್ಲಿ ಇರುತ್ತಾರೆ ಎನ್ನುತ್ತಾರೆ. ಸುಳ್ಳು ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆ. ಆ ಪತ್ರವನ್ನು ನಾನು ನೋಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವುದನ್ನು ನಾನು ನೋಡಿರುತ್ತೇನೆ. ಕೋರ್ಟ್ ದಾಖಲೆಯಲ್ಲಿ ಕ್ರಯಪತ್ರವನ್ನು ನಾನು ತೋರಿಸುತ್ತೇನೆ. ದುರುದ್ದೇಶದಿಂದ ಸುಳ್ಳು ದಾಖಲೆಯನ್ನು ಮಾಡಿದ್ದಾರೆ ಅಂತ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಉದ್ದೇಶ ಇಟ್ಟುಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರಿಗೆ ಜಂಜರ್ ನಂ 120 ಆಸ್ತಿ ನಂ.120 ಮತ್ತು ಜಂಜರ್ ನಂ 54 ಖಾತೆ ನಂ.36 ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಹಳೆ ನಂಬರ್ ಗೊತ್ತು ಹೊಸ ನಂಬರ್ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಹಳೆ ನಂಬರ್ 54. ಪ್ರತಿವಾದಿ ನಂ.3 ರವರು ಕೃಷ್ಣಪ್ಪಶೆಟ್ಟಿ ಇವರ ಕಡೆಯಿಂದ ಸದರಿ ಆಸ್ತಿಯನ್ನು ಕ್ರಯಕ್ಕೆ ಪಡೆದಿರಬಹುದು. ಕ್ರಯಪತ್ರ ಆದಾರದ ಮೇಲೆ ಪ್ರತಿವಾದಿ ನಂ.3 ರ ಹೆಸರಿನಲ್ಲಿ ಖಾತೆ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ರಿಜಿಸ್ಟರ್ ಬೇಕಲ್ಲಾ ಎನ್ನುತ್ತಾರೆ. ಪಂಚಾಯಿತಿಯಲ್ಲಿ ಖಾತೆ ನಂ.110ಎ ಆಸ್ತಿ ನಂ.65 ಅಂತ ಇದೆ ಎಂದರೆ ಇರಬಹುದು. ಕ್ರಯಕ್ಕೆ ಪಡೆದುಕೊಂಡ ಪ್ರಕಾರ 3ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸುಳ್ಳು ಬೋಗಸ್ ಮಾಡಿದ್ದಾರೆ ಅಂತ ನನ್ನ ವಾದ ಪತ್ರದಲ್ಲಿ ನಾನು ಹೇಳಿಲ್ಲ. ಸುಳ್ಳು ಬೋಗಸ್ ಇದೆ ಅಂತ ಗ್ರಾಮ ಪಂಚಾಯಿತಿಗೆ ದೂರು ಕೊಟ್ಟಿರುತ್ತೇನೆ. ದೂರು ಕೊಟ್ಟಿರುವ ಬಗ್ಗೆ ದಾಖಲೆ ಇಲ್ಲ ಬಾಯಿ ಮೂಲಕ ಹೇಳಿರುತ್ತೇನೆ. ನಾನು ಹೇಳುವ ರೀತಿಯಲ್ಲಿ ಸುಳ್ಳು ಬೋಗಸ್ ದಾಖಲೆಗಳನ್ನು ಸೃಷ್ಟಿಸಿಕೊಂಡಿಲ್ಲ ಕಾನೂನು ಬದ್ದ

ಕ್ರಯಪತ್ರಗಳು ಇವೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಉದ್ದ ಅಗಲ ಅಳತೆ ಇಲ್ಲ ಎನ್ನುತ್ತಾರೆ. ಸೋಮಶೆಟ್ಟಿ ಮತ್ತು ಕಾಂತಪ್ಪಶೆಟ್ಟಿ ಅಣ್ಣತಮ್ಮಂದಿರು ಎಂದರೆ ಸರಿ. ಸೋಮಶೆಟ್ಟಿ ಮತ್ತು ಕಾಂತಪ್ಪಶೆಟ್ಟಿ ಇವರು ಪವಡಪ್ಪ ಇವರ ಮಕ್ಕಳು ಎಂದರೆ ಸರಿ. ಪವಡಪ್ಪನಿಗೆ ಬೆನಕಪ್ಪ ಎಂಬ ಸಹೋದರ ಇದ್ದ ಎಂದರೆ ನನಗೆ ಗೊತ್ತಿಲ್ಲ. ಪವಡಪ್ಪ ಮತ್ತು ಬೆನಕಪ್ಪ ಇಬ್ಬರೂ ಒಟ್ಟಿಗೆ ಇದ್ದರು ಎಂದರೆ ಗೊತ್ತಿಲ್ಲ. ಪವಡಪ್ಪ ಮತ್ತು ಬೆನಕಪ್ಪ ಇವರು ಪ್ರತಿವಾದಿ ನಂ.3, 4 ಮತ್ತು 12 ರವರಿಗೆ ಅಜ್ಜಂದಿರಾಗಬೇಕು ಎಂದರೆ ಸರಿ. ಬೆನಕಪ್ಪ ಇವರು ತಾಃ 10.5.1916 ರಂದು ಕ್ರಯಪತ್ರದ ಮೂಲಕ ಖಾತೆ ನಂ.57 ಮತ್ತು 62 ರ ಮನೆ ಮತ್ತು ಖಾಲಿ ಜಾಗ ಪಡೆದಿದ್ದರು ಎಂದರೆ ಸರಿ. ಆದರೆ ಅದಕ್ಕೆ ವಿಸ್ತೀರ್ಣ ಇರುವುದಿಲ್ಲ. ಬೆನಕಪ್ಪ ಇವರು ಖರೀದಿ ಪಡೆಯುವ ಪೂರ್ವದಲ್ಲಿ ಹಾಲಪ್ಪ ಇವರು ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರದ ಆದಾರದ ಮೇಲೆ ಬೆನಕಪ್ಪ ಇವರ ಹೆಸರ ಮೇಲೆ ಖಾತೆಯಾಗಿರಬಹುದು. ಸದರಿ ಆಸ್ತಿಯು ಪ್ರತಿವಾದಿ ನಂ.12 ರ ತಂದೆಯ ಹೆಸರಿಗೆ ಬಂದಿತ್ತು ಎಂದರೆ ಸರಿ. ಅದೇ ರೀತಿ ಖಾತೆ ನಂ.57 ರ ಮನೆ ಮತ್ತು ಖುಲ್ಲಾ ಜಾಗ ಪ್ರತಿವಾದಿ ನಂ.3 ಮತ್ತು 4 ರ ತಂದೆ ಹಿಸ್ಸೆಗೆ ಬಂದಿದೆ ಎಂದರೆ ಸರಿ. ಸೋಮಶೆಟ್ಟಿ ಮತ್ತು ಕಾಂತಶೆಟ್ಟಿ ತೀರಿಕೊಂಡ ನಂತರ ಅವರ ಮಕ್ಕಳ ಪ್ರತಿವಾದಿ ನಂ. 4 ಮತ್ತು 12 ರ ಸ್ವಾಧೀನದಲ್ಲಿದೆ ಎಂದರೆ ಸರಿ. ಕಾಂತಪ್ಪಶೆಟ್ಟಿಯವರು ಜೀವಂತ ಇದ್ದಾಗ ಪಂಚಾಯಿತಿಯವರು ಕೆಲವು ಆಸ್ತಿಗಳನ್ನು ಹರಾಜಿಗೆ ಹಾಕಿದ್ದರು ಎಂದರೆ ಯಾವುದೇ ದಾಖಲೆಗಳು ಇರುವುದಿಲ್ಲ. 62 ರ ಕೆಲವು ಭಾಗಗಳನ್ನು ಮಾರಾಟ ಮಾಡಲಾಗುತ್ತದೆ ಅಂತ ಪ್ರಕಟಣೆ ಕೊಟ್ಟರು ಎಂದರೆ ಸರಿಯಲ್ಲ. ಹರಾಜಿನ ಪಟ್ಟಿಯನ್ನು ಆಗಿನ ಉಪ ವಿಭಾಗಾಧಿಕಾರಿಯವರ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. 27.1.1971 ರಂದು ಅರ್ಜಿ ಸಲ್ಲಿಸಿ ವಜಾಗೊಂಡಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವತ್ತೂ ಹರಾಜು ಆಗಿಲ್ಲ ಮತ್ತು ಅರ್ಜಿ ಸಲ್ಲಿಸಿಲ್ಲ ಎನ್ನುತ್ತಾರೆ. ಕಾಂತಪ್ಪಶೆಟ್ಟಿ ರವರು ಶಿಖಾರಿಪುರ ಮುನ್ಸಿಪ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂ. 147-1972 ಆಸ್ತಿ ಸಂಖ್ಯೆ 62 ಕ್ಕೆ ದಾವೆ ದಾಖಲಿಸಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದಕ್ಕೂ ಆ ದಾವೆಗೂ ಸಂಬಂದವೇ ಇಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ಆಸ್ತಿ ಸಂಖ್ಯೆ 62 ಕಾಂತಪ್ಪಶೆಟ್ಟಿ ಇವರಿಗೆ ಸೇರಿದ್ದು ಅಂತ ತೀರ್ಪು ಆಗಿದೆ ಎಂದರೆ ಸರಿಯಲ್ಲ. ಈವತ್ತಿಗೂ ಸಹ ನ್ಯಾಯ ಇದ್ದು ಅದು ಸರ್ಕಾರಿ ಜಾಗ ಎನ್ನುತ್ತಾರೆ. ಸಾಕ್ಷಿ ಮುಂದುವರೆದು 62 ರ ಮೇಲೆ ಕೇಸು ಹಾಕಿಲ್ಲ ಸರ್ಕಾರಿ ಉಡೇವು ಮೇಲೆ ಕೇಸು ಹಾಕಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ಮತ್ತೊಮ್ಮೆ ಅಸಲು ದಾವಾ ಸಂ 147-1972 ಆಸ್ತಿ ಸಂಖ್ಯೆ ಕ್ಕೆ ದಾವೆ ಹಾಕಿ ಡಿಕ್ರಿಯಾಗಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಡಿಕ್ರಿ ಆಗಿರಬಹುದು ಅದಕ್ಕೆ ನನ್ನ ತಕರಾರು ಇಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿ ನಂ.13 ರವರ ವಿರುದ್ದ ನಿರ್ಬಂದಕಾಜ್ಞೆ ಹೊರಡಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಆದ ಡಿಕ್ರಿಯ ವಿರುದ್ದ ಅಪೀಲು ಹಾಕಿದ್ದರು ಎಂದರೆ ಸರಿ. ಸದರಿ ಅಪೀಲು ವಜಾ ಆಗಿದೆ ಎಂದರೆ ಸರಿಯಲ್ಲ. ಆಗಿನ ಗ್ರಾಮ ಪಂಚಾಯಿತಿಯವರು ಸದರಿ ಡಿಕ್ರಿಯ ವಿರುದ್ದ ಮೇಲ್ಮನವಿ ಹಾಕಿದ್ದರು ಎಂದರೆ ಸಾಕ್ಷಿಯು ಆಗ ಯಾವುದೇ ಅಧಿಕಾರ ಇರಲಿಲ್ಲ ಎನ್ನುತ್ತಾರೆ. ಹಳೆ ಮನೆಯನ್ನು ಕೆಡವಿ ಆರ್ ಸಿಸಿ ಕಟ್ಟಡ ಕಟ್ಟಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹಳೆ ಮನೆ ಕೆಡವಿದ ಜಾಗೆ ಖಾಲಿ ಇದ್ದು ಹಿಂಭಾಗದಲ್ಲಿ ಸರ್ಕಾರಿ ಆರ್ ಸಿ ಸಿ ಕಟ್ಟಡ ಕಟ್ಟಿದ್ದಾರೆ ಎನ್ನುತ್ತಾರೆ. ಹಳೆ ಮನೆ ಜಾಗದಲ್ಲಿ ಆರ್ ಸಿ ಸಿ ಕಟ್ಟಿದ್ದು ಎಂದರೆ ಸರಿಯಲ್ಲ. ಹಳೇ ನಂ.62 ಈಗ ಹೊಸ ಸಂಖ್ಯೆ ಖಾತೆ

ನಂ.150 ಆಸ್ತಿ ನಂ.111 ಆಗಿದೆ ಎಂದರೆ ಸರಿ. ಆದರೆ ಅಲ್ಲಿ ಕಟ್ಟಡ ಕಟ್ಟಿಲ್ಲ ಎನ್ನುತ್ತಾರೆ. ಹಂಚಿನ ಮನೆ ತುಂಬಾ ಹಳೆಯದಾಗಿತ್ತು ಎಂದರೆ ಸರಿ. ಅದು ವಾಸಕ್ಕೆ ಯೋಗ್ಯವಾಗಿರಲಿಲ್ಲ ಎಂದರೆ ಸರಿ. ಆ ಕಾರಣಕ್ಕಾಗಿ ಸದರಿ ಮನೆಯನ್ನು ಕೆಡವಿ ಅಲ್ಲಿ ಆರ್ ಸಿ ಸಿ ಕಟ್ಟಡವನ್ನುಕಟ್ಟಿದ್ದಾರೆ ಎಂದರೆ ಸರಿಯಲ್ಲ, ಸರ್ಕಾರಿ ಜಾಗೆಯಲ್ಲಿ ಕಟ್ಟಿರುತ್ತಾರೆ. ಪ್ರತಿವಾದಿ ನಂ.12 ರವರು ಅಲ್ಲಿ ಹಿಟ್ಟಿನ ಗಿರಣಿ ನಡೆಸುತ್ತಾರೆ ಎಂದರೆ ಸರಿ. ಅಲ್ಲಿ 1963 ರಿಂದ ಹಿಟ್ಟಿನ ಗಿರಣಿ ನಡೆಸುತ್ತಿದ್ದಾರೆ ಎಂದರೆ ಗೊತ್ತಿಲ್ಲ, ಹಿಟ್ಟಿನ ಗಿರಣಿಯನ್ನು ಕಾಂತಪ್ಪಶೆಟ್ಟಿ ನಡೆಸುತ್ತಿದ್ದರು ಎಂದರೆ ಸರಿ. ಅವರು ಸತ್ತ ನಂತರ ಇವರು ಮುಂದುವರೆಸುತ್ತಾ ಬಂದಿದ್ದಾರೆ ಎಂದರೆ ಸರಿ. ಹಿಟ್ಟಿನ ಗಿರಣಿಯಲ್ಲಿ ಸಹ ಕಾಂತಪ್ಪಶೆಟ್ಟಿರವರ ಹೆಸರು ಇದೆ ಎಂದರೆ ಸರಿಯಲ್ಲ, ಭತ್ತದ ಬಣವೆ ಮತ್ತು ಗೋಬರ್‌ಗ್ಯಾಸ್‌ನ್ನು ಅವರ ಮನೆ ಹಿಂದುಗಡೆ ಖಾಲಿ ಜಾಗೆಯಲ್ಲಿ ಹಾಕಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕೋಟೆಗೆ ಹೊಂದಿಕೊಂಡು ಹಾಕಿದ್ದಾರೆ ಎನ್ನುತ್ತಾರೆ. ಅದಕ್ಕೆ ಲಗತ್ತಾಗಿ 57-2 ಇದೆ ಎಂದರೆ ಸರಿಯಲ್ಲ, ಅದು ಬೇರೆ ಇರುತ್ತದೆ. ಸದರಿ ಸ್ವತ್ತನ್ನು ಪ್ರತಿವಾದಿ ನಂ.4 ಮತ್ತು ಅವರ ಸಹೋದರ ಪವಡಪ್ಪ ಶೆಟ್ಟಿ ಮತ್ತು ರಾಜಪ್ಪಶೆಟ್ಟಿ ಎಂಬುವವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಮಂಜುನಾಥಶೆಟ್ಟಿರವರ ತಾತ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ.

ಮಂಜುನಾಥಶೆಟ್ಟಿಯವರು ಕ್ರಯಕ್ಕೆ ಪಡೆದ ಜಾಗೆಯಲ್ಲಿ ಮನೆಯ ಹಿಂದುಗಡೆ ಇರುವ ಖಾಲಿ ಜಾಗದಲ್ಲಿ ಗೋಬರ್ ಗ್ಯಾಸ್ ಮತ್ತು ಬಣವೆಯನ್ನು ಹಾಕಿಕೊಂಡು ಇದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸರ್ಕಾರಿ ಜಾಗೆಯಲ್ಲಿ ಹಾಕಿಕೊಂಡಿದ್ದಾರೆ ಎನ್ನುತ್ತಾರೆ. ದನದ ಕೊಟ್ಟಿಗೆಯನ್ನು ಸಹ ಸರ್ಕಾರಿ ಜಾಗದಲ್ಲಿ ಹಾಕಿಕೊಂಡಿದ್ದಾರೆ. ದನದ ಕೊಟ್ಟಿಗೆ ಖಾತೆ ನಂ.62ರಲ್ಲಿದೆ ಎಂದರೆ ಸರಿಯಲ್ಲ, ಪ್ರತಿವಾದಿ ನಂ.8 ರವರು ಹನುಮಂತಪ್ಪ ಇವರ ಸೊಸೆ ಇರುತ್ತಾರೆ. ಅವರು ಒಂದೇ ಮನೆಯಲ್ಲಿ 3 ಭಾಗ ಮಾಡಿಕೊಂಡು ವಾಸ ಇರುತ್ತಾರೆ. ಅದರ ಹಳೆಯ ಜಂಜರ್ ನಂ.62, 64, 65 ಮತ್ತು ಖಾತೆ ನಂ.40 ಎಂದರೆ ಸರಿ. ಖಾತೆ ನಂಬರ್ ಹನುಮಂತಪ್ಪನ ಹೆಸರಿನಲ್ಲಿ ಓಡುತ್ತಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಹನುಮಂತಪ್ಪ ಇವರು ಕ್ರಯಕ್ಕೆ ಪಡೆದಿರಬಹುದು. ಸದರಿ ಆಸ್ತಿಯನ್ನು ಹನುಮಂತಪ್ಪ ಇವರು ಚಿಕ್ಕೋಡೆಯರ ಹನುಮಂತಪ್ಪ ಇವರಿಂದ ಕ್ರಯಕ್ಕೆ ಪಡೆದಿರಬಹುದು. ಅವರು ಸಹ ಮನೆಯ ಹಿಂದೆ ಮುಂದೆ ಇರುವ ಜಾಗದ ಸ್ವಾಧೀನದಲ್ಲಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹಿಂದುಗಡೆ ಸರ್ಕಾರದ ಜಾಗೆಯಲ್ಲಿ ಕಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ನಂ.8 ಮತ್ತು 11 ರವರು ಸಂಬಂಧಿಕರು ಎಂದರೆ ಸರಿ. ಪ್ರತಿವಾದಿ ನಂ.11 ರವರು ಮಂಗಳೂರು ಹೆಂಚಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಮನೆ ಹಿಂದೆ ಮುಂದೆ ಇರುವ ಜಾಗ ಅವರ ಸ್ವಾಧೀನದಲ್ಲಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮುಂದೆ ರಸ್ತೆ ಇದೆ ಹಿಂದೆ ಸರ್ಕಾರಿ ಜಾಗ ಇದೆ ಎನ್ನುತ್ತಾರೆ. ಸದರಿ ಆಸ್ತಿಯ ಸಂಖ್ಯೆ 148-ಬಿ ಆಸ್ತಿ ನಂ.109 ಎಂದರೆ ಇರಬಹುದು. ಆ ರೀತಿ ಸ್ವಾಧಿನ ಇದ್ದರೂ ಪ್ರತಿವಾದಿ ನಂ.8 ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ, ಸ್ವಾಧೀನ ಇದ್ದವರ ಹೆಸರಿನಲ್ಲಿದೆ ಎನ್ನುತ್ತಾರೆ. ಪ್ರತಿವಾದಿಯರು ಅವರವರ ಆಸ್ತಿಯ ಕಂದಾಯವನ್ನು ಕಟ್ಟುತ್ತಿರಬಹುದು. ಇದೇ ರೀತಿಯಾಗಿ ಬೇರೆ ಗ್ರಾಮಸ್ಥರು ಆ ಜಾಗೆಯಲ್ಲಿ ಇರುವುದಿಲ್ಲ, ಇದೇ ರೀತಿಯಾಗಿ ಬೇರೆ ಗ್ರಾಮಸ್ಥರು ಅನುಭವವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ಸರ್ಕಾರಿ ಜಾಗೆಯನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ ಎನ್ನುತ್ತಾರೆ. ವಾದಿ ನಂ.2 ರವರು ಪ್ರತಿವಾದಿಯರು ವಾಸ ಇರುವ ಲೈನಿನಲ್ಲಿ

ವಾಸ ಇದ್ದಾರೆ ಎಂದರೆ ಸರಿಯಲ್ಲ. ವಾದಿ ನಂ.2 ರವರು ಖಾತೆ ನಂ.141 ರಲ್ಲಿ ವಾಸ ಇಲ್ಲ. ಅದೇ ರೀತಿಯಾಗಿ ನಟರಾಜ, ಸತೀಶ ಮತ್ತು ಶೇಖರಪ್ಪ ಅದೇ ಲೈನಿನಲ್ಲಿ ಲಗತ್ತಾಗಿ ಅವರ ಜಾಗೆಯಲ್ಲಿರುತ್ತಾರೆ ಎಂದರೆ ಸರಿ. ವಾದಿ ನಂ. 2 ಅವರು ನನ್ನ ಹಾಗೆ ದಾವೆಯಲ್ಲಿ ವಾದಿ ಇದ್ದಾರೆ ಎಂದರೆ ಸರಿ. ಪ್ರತಿವಾದಿಯರು ಯಾವತ್ತೂ ಸಹ ದಾವಾ ಸ್ವತ್ತುಗಳಲ್ಲಿ ಅಕ್ರಮವಾಗಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಂಖ್ಯೆ 141 ರಲ್ಲಿ ವಾದಿ ನಂ.2 ರವರು ಸಹ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಖಾತಾ ಸಂಖ್ಯೆ 58 ರಲ್ಲಿ ಶಾಲೆ ಅಂತ ನಮೂದಿದ್ದು ಈಗ ಅಲ್ಲಿ ಶಾಲೆ ಇರುವುದಿಲ್ಲ ಕುಡಿಯುವ ನೀರಿನ ಘಟಕ ಇರುತ್ತದೆ. ಶಾಲೆ ಬೇರೆ ಕಡೆ ವರ್ಗಾವಣೆಗೊಂಡಿರುತ್ತದೆ. ಖಾತೆ ನಂ,73, 74, 59 ಮತ್ತು 61 ತೆರದ ಬಾವಿ ಮತ್ತು ರಸ್ತೆಗೆ ಸಂಬಂದಿಸಿದ ಖಾತೆಗಳು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ತೆರೆದ ಬಾವಿಗೆ ಬೇರೆ ನಂಬರ್ ಇರುತ್ತದೆ ಎನ್ನುತ್ತಾರೆ.

ದಾವಾ ಸ್ವತ್ತು ಸಂಖ್ಯೆ 141 ರಲ್ಲಿ ವಾದಿ ನಂ.2 ರವರು ಸ್ವಾಧೀನದಲ್ಲಿ ಇರುವುದು ಗೊತ್ತಿದ್ದರೂ ಸಹ ಅವರನ್ನು ವಾದಿಯರನ್ನಾಗಿ ಮಾಡಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಉಡೇವುಗೆ ಯಾವತ್ತೂ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜನಾಂಗವೇ ನಮ್ಮ ಜನಾಂಗವೇ ಬೇರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಬೇರೆ ಜನಾಂಗದವರು ಅವರಿಗೆ ತೊಂದರೆ ಕೊಡುತ್ತಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಅವರು ಒಂದೇ ಜನಾಂಗದವರು ಎನ್ನುತ್ತಾರೆ. ಸಾರ್ವಜನಿಕವಾಗಿ ದಾಖಲಿಸಿರುವ ದಾವೆಗೆ ಸಾರ್ವಜನಿಕವಾಗಿ ಪ್ರಕಟಣೆ ಕೊಟ್ಟಿಲ್ಲ. ವಾದಿ ಅಥವಾ ಪ್ರತಿವಾದಿಗಳಾಗಿ ಸೇರಬೇಕು ಅಂತ ನಾನು ಪ್ರಕಟಣೆ ಕೊಟ್ಟಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯಲ್ಲಿ ನನ್ನ ಉಖ್ತ್ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ